ಕೃಷಿ ವಿಶ್ವ ವಿದ್ಯಾನಿಲಯ

ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)

ಜಿ.ಕೆ.ವಿ.ಕೆ., ಬೆಂಗಳೂರು-560065

* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 23.10.2023

## ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ.

### ಕಳೆದ ಐದು ದಿನಗಳ ಹವಾಮಾನ ಸಾರಂಶ

| ನಿಯತಾಂಕಗಳು | 16.10.2023 | 17.10.2023 | 18.10.2023 | 19.10.2023 | 20.10.2023 |
|---|---|---|---|---|---|
| ಮಳೆ (ಮಿ ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (ಡಿ.ಸೆ. ) | 31.0 | 29.8 | 30.4 | 30.0 | 29.8 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21.2 | 20.2 | 18.8 | 18.2 | 18.0 |
| ಮೋಡ (ಪ್ರಮಾಣ) | 2 | 2 | 2 | 2 | 2 |
| ಆರ್ದ್ರತೆ 7.20 ಬೆ (ಶೇ) | 81 | 90 | 96 | 89 | 79 |
| ಆರ್ದ್ರತೆ 2.20 ಮ (ಶೇ) | 59 | 51 | 50 | 45 | - |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 2.7 | 4.8 | 3.7 | 4.2 | 4.1 |
| ಗಾಳಿಯ ದಿಕ್ಕು (ಡಿಗ್ರಿ) | 140 | 140 | 140 | 140 | 140 |

### ಈ ವಾರದ ಹವಾಮಾನ ಮುನ್ಸೂಚನೆ (ಭಾರತೀಯ ಹವಾಮಾನ ಇಲಾಖೆ)

(ದಿನಾಂಕ 24–10–2023 ರಿಂದ 28–10–2023 ವರೆಗೆ)

| ನಿಯತಾಂಕಗಳು | 24.10.2023 | 25.10.2023 | 26.10.2023 | 27.10.2023 | 28.10.2023 |
|---|---|---|---|---|---|
| ಮಳೆ (ಮಿ ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (ಡಿ.ಸೆ. ) | 30 | 31 | 31 | 31 | 30 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 18 | 18 | 19 | 19 | 18 |
| ಮೋಡ (ಪ್ರಮಾಣ) | 5 | 3 | 0 | 3 | 3 |
| ಆರ್ದ್ರತೆ 7.20 ಬೆ (ಶೇ) | 56 | 59 | 80 | 88 | 90 |
| ಆರ್ದ್ರತೆ 2.20 ಮ (ಶೇ) | 38 | 33 | 32 | 42 | 50 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 8 | 5 | 8 | 8 | 10 |
| ಗಾಳಿಯ ದಿಕ್ಕು (ಡಿಗ್ರಿ) | 68 | 60 | 112 | 90 | 103 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆಯಾಗುವ ಸಾದ್ಯತೆ ಕಡಿಮೆ. ದಿನದ ಗರಿಷ್ಠ ಉಷ್ಣಾಂಶ **30.0-31.0 $^{o}$C** ಮತ್ತು ಕನಿಷ್ಠ **18.0-19.0$^{o}$C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **56-90** % ಇದ್ದು **32-50** % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **5-10** ಕಿ.ಮೀ. ವೇಗದಲ್ಲಿ ಬೀಸುವ ಸ೦ಭವವಿದೆ.

**"ಹಸ್ತಕ್ಕೆ ಹದ, ಚಿತ್ತಕ್ಕೆ ಮಳೆ !"**

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| ಸಾಮಾನ್ಯ | | ➢ ಗೊಬ್ಬರದ ಗಿಡಗಳನ್ನು ಮತ್ತು ಕಳೆಗಿಡಗಳನ್ನು ಭೂ ಹೊದಿಕೆಯಾಗಿ ಬೆಳೆಗಳಿಕೆ ಹಾಕಿ ಇದರಿಂದ ಗೊಬ್ಬರ ಮತ್ತು ತೇವಾಂಶದ ಸಂರಕ್ಷಣೆಯಾಗುತ್ತದೆ. |
| ಮುಂಗಾರು ಬೆಳೆಗಳು | ಬೆಳವಣಿಗೆ ಹಂತ ಮತ್ತು ಹೂವಿನ ಹಂತ ಮಾಗುವ ಹಂತ | **ಈ ಕೆಳಗಿನ ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>➢ ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ–ಎಚ್.ಎ–3 ಮತ್ತು 4,ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್–1,41,42,44 ಮತ್ತು 53, ಹುರುಳಿ: ಪಿ.ಎಚ್.ಜಿ–9 ಮತ್ತು ಕೆ.ಬಿ.ಎಚ್–1,<br>➢ ರಾಗಿ ಬೆಳೆಗಳಲ್ಲಿ ಕಳೆಗಳ ಸಮಸ್ಯೆ ಹೆಚ್ಚಾಗಿರುತ್ತದೆ ಇದರ ನಿರ್ಮೂಲನೆಗೆ ಅಂತರ ಬೇಸಾಯ ಮಾಡಿ ಕಳೆ ನಿರ್ಮೂಲನೆ ಮಾಡಿ . |

| | | |
|---|---|---|
| | | ➢ ತೊಗರಿ ಬೆಳೆಯಲ್ಲಿ ಮೊಗ್ಗು ಮತ್ತು ಹೂವಿನ ಹಂತದಲ್ಲಿ ಕಾಯಿಕೊರಕ ಹುಳುವಿನ ಜೈವಿಕ ಹತೋಟಿ ಮಾಡಲು ಎಕರೆಗೆ 200 ಎಲ್.ಇ ನಂಜು ರೋಗಾಣು (ಹೆಚ್.ಎ.ಎನ್.ಪಿ.ವಿ) ಗಳನ್ನು 400 ಲೀಟರ್ ನೀರಿನಲ್ಲಿ ಸೇರಿಸಿ ಶೇ.0.1 ಟೀಪಾಲ್ ಮತ್ತು ಶೇ. 0.5 ರ ಬೆಲ್ಲದ ಪಾಕವನ್ನು ಬೆರೆಸಿ ಸಾಯಂಕಾಲದ ಸಮಯದಲ್ಲಿ ಸಿಂಪಡಿಸಬೇಕು. ಇದರಿಂದ ಮರಿ ಹುಳುಗಳಿಗೆ ನಂಜಾಣು ರೋಗ ತಗಲಿ ತಲೆ ಕೆಳಗಾಗಿ ನೇತಾಡುತ್ತಾ ಸಾಯುತ್ತವೆ ಮತ್ತು ಹೆಲಿಕೊವರ್ಪ ಮೋಹಕ ಬಲೆಗಳನ್ನು ಹೆಕ್ಟೇರ್ ಗೆ 10 ನ್ನು ಬಳಸಬೇಕು ಹಾಗು 20 ದಿನಗಳಿಗೊಮ್ಮೆ ಮೋಹಕ ವಸ್ತು (ಲ್ಯೂರ್) ಬದಲಿಸಬೇಕು.<br>➢ ತೊಗರಿ ಬೆಳೆಯಲ್ಲಿ ಸೊರಗು ರೋಗದ ಹತೋಟಿಗೆ ಕಾರ್ಬೆನ್‌ಡೈಜಿಮ್ 50 ಡಬ್ಲ್ಯೂ. ಪಿ. 2 ಗ್ರಾಂ/ಲೀ ನೀರಿನಲ್ಲಿ ಬೆರೆಸಿ ಬುಡಕ್ಕೆ ಸುರಿಯಿರಿ.<br>➢ ಸೊರಗು ರೋಗದ ಗಿಡಗಳನ್ನು ಕಿತ್ತು ಒಂದೆಡೆ ಹಾಕಿ ಸುಡಬೇಕು. |
| ಮಾವು | | 1. ಮಾವಿನ ತೋಪುಗಳಲ್ಲಿ ಒಣ ರೆಂಬೆ ಕೊಂಬೆಗಳನ್ನು ಕತ್ತರಿಸಿ ಹೊರಹಾಕಿ.<br>2. ಕಳೆ ನಿರ್ವಹಣೆಗೆ ಮತ್ತು ಭೂಮಿಯಲ್ಲಿನ ತೇವಾಂಶವನ್ನು ಸಂರಕ್ಷಿಸಲು ಅಂತರ ಬೇಸಾಯ ಮಾಡಬೇಕು.<br>3. ಮಾವಿನ ತೋಪಿನಲ್ಲಿ ಹೂವುಗಳು ಸಮನಾಗಿ ಬಿಡಲು ಪ್ಯಾಕ್ಲೋಬುಟ್ರಜೋಲ್ 5 ಗ್ರಾಂ ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. |
| **ಪಶುಸಂಗೋಪನೆ** | | ➢ ಬಿಸಿಲು, ಮಳೆ ಮತ್ತು ಬೀಸುವ ಗಾಳಿಯನ್ನು ತಪ್ಪಿಸಲು ಕೋಳಿ ಮನೆಯನ್ನು ಪೂರ್ವ–ಪಶ್ಚಿಮಕ್ಕೆ ಉದ್ದುದ್ದವಾಗಿ ಆಯಾಕಾರವಾಗಿ ಕಟ್ಟುವುದು ಸೂಕ್ತ.<br>➢ ಸೂಕ್ತವಾದ ಹವಾಮಾನ ಮತ್ತು ಯತೇಚ್ಚ ಮೇವು ಸಿಗುವುದರಿಂದ ಹೈನುಗಾರಿಕೆ, ಹಂದಿ ಸಾಕಾಣಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆಗೆ ಅನುವು ಮಾಡಿಕೊಡುತ್ತದೆ.<br>➢ ಹೈನುಗಾರಿಕೆಯಲ್ಲಿ ರೋಗಗಳ ನಿಯಂತ್ರಣಕ್ಕೆ ಪ್ರತಿ ವರ್ಷ ಲಸಿಕೆಯನ್ನು ಮಾಡಿಸುವುದು ಉತ್ತಮ.<br>➢ ಹಿಂಡಿ ಬೂಸವನ್ನು ಮೂರು–ನಾಲ್ಕು ಭಾಗ ಮಾಡಿ ಹಗಲಿನಲ್ಲಿ ಸಂಜೆ ಮತ್ತು ರಾತ್ರಿಯಲ್ಲಿ ತಿನ್ನಿಸುವುದು ಉತ್ತಮ.<br>➢ ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.) |

**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಪ್:**

- ➢ ರೈತರು **"ದಾಮಿನಿ"** ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ➢ ಹಾಗೆಯೇ **"ಮೌಸಮ್"** ಮತ್ತು **"ಮೇಘದೂತ್"** ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.